# ಹುಟ್ಟಿದ ಭಯ ಅವತ್ತೇ ಉಡುಗಿತು



ಕೀರ್ತನಾ ರಾಜ್
ಕಲರ್ಸ್ ಕನ್ನಡ 'ಕರಿಮಣಿ'ಯ ಸಿಂಚನಾ

◆ **ಈ ಅವಕಾಶ ನಿಮಗೆ ಹೇಗೆ ಸಿಕ್ಕಿತು?**

ಇದೇ ಮೊದಲ ಧಾರಾವಾಹಿ. ಮೊದಲ ಯತ್ನದಲ್ಲಿಯೇ ಪ್ರಮುಖ ಪಾತ್ರ ನಿರ್ವಹಿಸುತ್ತಿರುವ ಖುಷಿ ಇದೆ. ಪಾತ್ರ ಮತ್ತು ಕಥೆಯ ಬೆಳವಣಿಗೆ ಇಷ್ಟವಾಗುತ್ತದೆ. ಇದಕ್ಕೆ ಉತ್ತಮ ಪ್ರತಿಕ್ರಿಯೆ ಕೂಡ ಬಂದಿದೆ. ಚಿಕ್ಕ ವಯಸ್ಸಿನಿಂದ ನಟಿ ಆಗಬೇಕು ಎನ್ನುವ ಕನಸು ಇತ್ತು. ಈ ಪಾತ್ರದ ಮೂಲಕ ಅದು ನನಸಾಗಿದೆ. ಇದಕ್ಕಿಂತ ಮುಂಚೆ ಏವಿಯೇಷನ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದೆ. ಆ ಕೆಲಸವೇನೋ ಚೆನ್ನಾಗಿತ್ತು. ಅದು ತುಂಬ ಕಷ್ಟ ಆಗುತ್ತಿತ್ತು. ಈಗ ತುಂಬ ಆರಾಮಾಗಿದ್ದೇನೆ. ಹುಟ್ಟಿ ಬೆಳೆದಿದ್ದು ಬೆಂಗಳೂರು. ಬಿಕಾಂ ಓದಿದ್ದೇನೆ.

◆ **ನಟನೆಯ ಅಭ್ಯಾಸವನ್ನು ಹೇಗೆ ಮಾಡಿದಿರಿ?**

ಫೇಸ್‌ಬುಕ್‌ನಲ್ಲಿ ನನ್ನ ಫೋಟೊ ನೋಡಿ ಆಡಿಷನ್ನಿಗೆ ಕರೆದಿದ್ದರು. ಅದಾಗಿ ಎಂಟು ವರ್ಷಗಳೇ ಕಳೆದಿವೆ. ಆ ಘಟನೆಯ ನಂತರ ಒಂದಾದ ಮೇಲೆ ಒಂದರಂತೆ ಮೂರ್ನಾಲ್ಕು ಪಾತ್ರಗಳಿಗೆ ಆಡಿಷನ್ ನೀಡಿದೆ. ಒಂದರಲ್ಲೂ ಅವಕಾಶ ಸಿಗಲಿಲ್ಲ. ಇದು ನನ್ನ ಕ್ಷೇತ್ರ ಅಲ್ಲ, ನನ್ನ ಕೈಯಲ್ಲಿ ಆಗುವ ಕೆಲಸವೂ ಇದಲ್ಲ ಎಂದು ಕೆಲಸಕ್ಕೆ ಸೇರಿದೆ. ಇತ್ತೀಚೆಗೆ ಆಡಿಷನ್‌ಗೆ ಫೋನ್ ಬಂತು. ಅದು ಅನಿರೀಕ್ಷಿತವಾಗಿದ್ದರಿಂದ ಯಾವ ತಯಾರಿಯನ್ನೂ ಮಾಡಿಕೊಂಡಿರಲಿಲ್ಲ. ನಿರ್ದೇಶಕ ಶ್ರೀನಿವಾಸ ರಾಮನಗರ ಮತ್ತು ದೀಪಕ್ ಮಹಾದೇವ ಪಾತ್ರದ ಬಗ್ಗೆ ಮಾಹಿತಿ ನೀಡಿ ಹೇಗೆ ಮಾಡಬೇಕು ಎಂದು ಹೇಳಿದರು. ಅವರ ಸೂಚನೆಯನ್ನು ಪಾಲಿಸಿದೆ. ಪಾತ್ರ ಸಿಕ್ಕಿತು. ನಾಲ್ಕು ತಿಂಗಳು ನಟಿಸುವುದು ತುಂಬ ಕಷ್ಟ ಆಯಿತು. ಈಗ ಒಂದು ಹಂತಕ್ಕೆ ಬೆಳೆದಿದ್ದೇನೆ. ನಮ್ಮ ತಂಡದ ಅನುಭವಿಗಳ ಮಾರ್ಗದರ್ಶನ ಅಭಿನಯವನ್ನು ಕಲಿಯಲು ತುಂಬ ಸಹಾಯ ಆಯಿತು. ಮನೆಯಲ್ಲಿ ಕನ್ನಡಿ ಮುಂದೆ ನಿಂತು ಒಂದಿಷ್ಟು ತಾಲೀಮು ಮಾಡುತ್ತಿದ್ದೆ. ಜಿಯೊ ಸಿನಿಮಾದಲ್ಲಿಯೂ ನನ್ನ ನಟನೆ ನೋಡಿ ಅಭ್ಯಾಸ ಮಾಡುತ್ತಿದ್ದೆ. ಪಾತ್ರವನ್ನು ಹೇಗೆ ಪರಿಣಾಮಕಾರಿಯಾಗಿ ಮಾಡಬಹುದಿತ್ತು ಎಂದು ಯೋಚಿಸುತ್ತಿದ್ದೆ. ಒಟ್ಟಾರೆ ಹಿರಿಯರ ಮಾರ್ಗದರ್ಶನದಿಂದ ಯಶಸ್ಸು ಸಿಕ್ಕಿದೆ.

◆ **ಮೊದಲ ದಿನದ ಚಿತ್ರೀಕರಣದ ಅನುಭವ ಹೇಗಿತ್ತು?**

ಭೀತಳಾಗಿದ್ದೆ. ಏಕೆಂದರೆ ಅಲ್ಲಿ ಅನುಭವಿ ಕಲಾವಿದರೇ ಹೆಚ್ಚಿದ್ದರು. ಅನೇಕರನ್ನು ನಾನು ಟೀವಿಯಲ್ಲಿ ಮಾತ್ರ ನೋಡಿದ್ದೆ. ಅವರ ನಿಜವಾದ ಹೆಸರೂ ಗೊತ್ತಿರಲಿಲ್ಲ. ಅದುವರೆಗೆ ಯಾರನ್ನೂ ಭೇಟಿಯಾಗಿರಲಿಲ್ಲ. ಎಲ್ಲರೂ ನೋಡಿದವರೇ ಆಗಿದ್ದರಿಂದ ದುಗುಡದಲ್ಲಿದ್ದೆ. ಅವತ್ತು ಅಳುವುದೊಂದು ಬಾಕಿ ಇತ್ತು. ನನ್ನ ಪರಿಸ್ಥಿತಿಯನ್ನು ಮನಗಂಡ ಅವರೆಲ್ಲ ಸ್ಪಂದಿಸಿ ಪ್ರೋತ್ಸಾಹ ನೀಡಿದರು. ರೇಣುಕಾ ಬಾಲಿ, ಶ್ರೀಮತಿ, ಅನುಷಾ ರಾವ್, ಪ್ರತಾಪ್ ಪ್ರಸಾದ್ ಧೈರ್ಯ ತುಂಬಿದರು. ಭಯ ಬಿಟ್ಟುಬಿಡು, ಆಗ ಡೈಲಾಗ್ ಮರೆಯುವುದಿಲ್ಲ. ನೀನು ಚೆನ್ನಾಗಿಯೇ ಮಾಡುತ್ತಿದ್ದೀಯಾ ಎಂದು ಸಮಾಧಾನ ಮಾಡಿದರು. ನಾನು ಅಂದುಕೊಂಡಂತೆ ಅವರು ಹಿರಿಯರು ಎಂದು ಗರ್ವಪಡದೆ, ಬೆಂಬಲಿಸಿ ಬೆನ್ನು ತಟ್ಟಿದರು. ಅನೇಕರು ವಿನೋದದ ಮಾತಿನಿಂದ ಖುಷಿಪಡಿಸಿದ್ದಾರೆ. ಅವರ ಸಹಕಾರ ಮರೆಯಲು ಸಾಧ್ಯವಿಲ್ಲ. ಹಾಗಾಗಿ ಮೊದಲ ದಿನವೇ ಹುಟ್ಟಿದ ಭಯ ಉಡುಗಿತು.

◆ **ಈ ಕಥೆಯನ್ನು ನೀವು ಹೇಗೆ ಅನುಭವಿಸುತ್ತಿದ್ದೀರಿ?**

ನಾನು ನಾಯಕನ ಅತ್ತೆ ಮಗಳು. ನನಗೆ ಕರ್ಣನ ಮೇಲೆ ಪ್ರೀತಿ ಚಿಕ್ಕವಯಸ್ಸಿನಿಂದಲೇ ಹುಟ್ಟಿರುತ್ತದೆ. ವಾಸ್ತವದಲ್ಲಿ ಅವನಿಗೆ ಸಾಹಿತ್ಯಾ ಇಷ್ಟವಾಗಿದ್ದಾಳೆ ಎಂದು ನನಗೆ ಗೊತ್ತಾಗಿದೆ. ಭಗ್ನಪ್ರೇಮಿಯಾಗಿದ್ದೇನೆ. ನನಗೆ ಏನು ಮಾಡಬೇಕು ಎಂದು ಗೊತ್ತಾಗುತ್ತಿಲ್ಲ. ಅದರಲ್ಲೂ ಸಾಹಿತ್ಯಾ ಬೇರೆ ನನಗೆ ಗೆಳತಿ ಕೂಡ. ಒಟ್ಟಾರೆ ಸಿಂಚನಾ ನನಗೆ ತುಂಬ ಇಷ್ಟ ಆಗಿದ್ದಾಳೆ. ಕೀರ್ತನಾಳಿಗೂ ಅವಳಿಗೂ ತುಂಬ ಅಂತರ ಇದೆ. ಕ್ಯಾಮೆರಾ ಎದುರಾದರೆ ನನ್ನನ್ನು ನಾನು ಕೀರ್ತನಾ ಎನ್ನುವುದನ್ನು ಮರೆತುಬಿಡುತ್ತೇನೆ. ಪಾತ್ರ ನನ್ನನ್ನೇ ಪ್ರಭಾವಿಸಿದೆ. ಇಂತಹ ಒಳ್ಳೆಯ ಪಾತ್ರ ನನಗೆ ಕೊಟ್ಟಿದ್ದಾರೆ ಎಂದು ಖುಷಿಯಾಗುತ್ತದೆ.

◆ **ಮುಂದಿನ ದಿನಗಳ ಬಗ್ಗೆ ಏನು ಯೋಚಿಸಿದ್ದೀರಿ?**

ಮುಂದೆ ನಟನೆಯನ್ನೇ ಮಾಡಬೇಕು ಎನ್ನುವುದು ನನ್ನಾಸೆ. ಈ ಕ್ಷೇತ್ರದಲ್ಲಿ ಇನ್ನೂ ನಾನು ಅಂಬೆಗಾಲಿಡುವ ಶಿಶು. ಕಲಿಯುವುದು ಸಾಕಷ್ಟಿದೆ. ಕಲಿಯಲು ಇದಕ್ಕಿಂತ ಒಳ್ಳೆಯ ತಂಡ ಸಿಗಲಿಕ್ಕಿಲ್ಲ ಎಂದು ಅನ್ನಿಸುತ್ತದೆ. ಮುಂದಿನ ಹೆಜ್ಜೆ ಊರಲು ಇನ್ನೊಂದಿಷ್ಟು ಕಲಿಯಬೇಕಿದೆ. ಒಳ್ಳೆಯ ಅವಕಾಶ ನಿರೀಕ್ಷಿಸುತ್ತಿದ್ದೇನೆ. ಪರಿಣಾಮ ಬೀರಬಹುದಾದ ಪಾತ್ರವನ್ನು ಭವಿಷ್ಯದಲ್ಲಿ ಮಾಡುವ ಆಸೆ ಇದೆ.

■ **ರಾಘವೇಂದ್ರ ಕೆ.**